ಬಡಿಯಲಿಲ್ಲ. ಕಾಂಟ್ರ್ಯಾಕ್ಟರ್ ಹಾದಿಮನಿ ಲಂಚದ ಆಮಿಷವೊಡ್ಡಿದ್ದು, ಕೆಲಸದ ಬಗ್ಗೆ ತಾನು ತೆಗೆದ ತಕರಾರು, ಹೆಂಡತಿ ಮಾಮೂಲಿ ಪಡೆಯುವಂತೆ ಒತ್ತಾಯಿಸಿದ್ದು, ನನ್ನ ಪ್ರತಿಕ್ರಿಯೆಯನ್ನು ಸಮ್ಮತಿ ಎಂದು ಭಾವಿಸಿ ಅವಳು ಖುಷಿಗೊಂಡಿದ್ದು ಇಡೀ ಘಟನೆ ಚಿದಂಬರನ ಕಣ್ಮುಂದೆ ಸುಳಿದು ಹೋಯಿತು. ಇದುವರೆಗೂ ತನ್ನ ಅನುಭವಕ್ಕೆ ಬಂದಿದ್ದು ಅದು ಹೆಂಡತಿಯ ಮನಸ್ಸಿನ ವಾಸನೆ ಎಂದು ಅರಿವಾಗಲು ಅವನಿಗೆ ಕೆಲವು ಕ್ಷಣಗಳೇ ಹಿಡಿದವು. ಲಂಚದ ವಿಷಯವನ್ನೆ ಮನಸಿನಲ್ಲಿ ತುಂಬಿಕೊಂಡವಳಿಂದ ಮನದ ಮಹತ್ವಾಕಾಂಕ್ಷೆ ವಾಸನೆಯಾಗಿ ಹೊರಬಂದಿತ್ತು. ದೇಹದಂತೆ ಮನಸ್ಸಿಗೂ ವಾಸನೆ ಇರುವ ಸಂಗತಿ ಆ ಕ್ಷಣಕ್ಕೆ ಅಚ್ಚರಿಗೆ ಕಾರಣವಾಗಿ ಇಂದ್ರಿಯಾತೀತವಾದ ಮನಸ್ಸಿನ ವಾಸನೆಯ ಅನುಭವವೇ ನಂಬಲಸಾಧ್ಯ ಸಂಗತಿಯಾಗಿತ್ತು.

* * *

ಬೇರೆಯವರ ಮನಸ್ಸಿನ ಕಾಮನೆಗಳು ವಾಸನೆಯ ರೂಪದಲ್ಲಿ ತನ್ನ ಅನುಭವಕ್ಕೆ ಬರುತ್ತವೆ ಎನ್ನುವುದು ಚಿದಂಬರನಿಗೆ ನಿಚ್ಚಳವಾಗಿ ಅರಿವಾದ ದಿನದಿಂದ ಅವನಿಗೆ ತನ್ನೆದುರಿನಿಂದ ಯಾರೇ ನಡೆದು ಹೋದರೂ ಮೂಗಿನ ಹೊಳ್ಳೆಗಳನ್ನು ಅರಳಿಸಿ ಆಘ್ರಾಣಿಸುವ ಹೊಸ ಖಯಾಲಿಯೊಂದು ಶುರುವಾಯಿತು. ಪದ್ಮಾವತಿಗೆ ಗಂಡನ ಈ ಹೊಸ ವರಸೆ ಆರಂಭದಲ್ಲಿ ಸಮಸ್ಯೆಯಾಗಿ ಕಾಣಿಸಿ ಆ ಕುರಿತು ಕೆಲವು ದಿನ ಆಡಿಕೊಂಡಳಾದರೂ ಇದು ವಾಸಿಯಾಗದ ಕಾಯಿಲೆಯೆಂದೂ ಇದಕ್ಕೆಲ್ಲ ತನ್ನ ದಿವ್ಯ ನಿರ್ಲಕ್ಷ್ಯವೇ ಮದ್ದು ಎಂದು ಸುಮ್ಮನಾಗಿಬಿಟ್ಟಳು. ಅದೊಂದು ದಿನ ಆಫೀಸಿನಲ್ಲಿ ಫೈಲ್‌ಗಳನ್ನು ಪರಿಶೀಲಿಸುತ್ತ ಕುಳಿತಿದ್ದ ಚಿದಂಬರನ ಮೂಗಿಗೆ ವಿಚಿತ್ರ ವಾಸನೆಯೊಂದು ಆವರಿಸಿ ಮುಖ ಸಿಂಡರಿಸಿದ. ಇಂಥದ್ದೆ ವಾಸನೆಯ ಅನುಭವ ಕೆಲವು ದಿನಗಳ ಹಿಂದೆ ತನಗೆ ಮನೆಯಲ್ಲಾದದ್ದನ್ನು ಸ್ಮರಣೆಗೆ ತಂದುಕೊಂಡವನಿಗೆ ಇದು ಮನಸ್ಸಿನ ವಾಸನೆ ಎಂದು ಗೊತ್ತಾದದ್ದೇ ತಲೆ ಎತ್ತಿ ನೋಡಿದವನ ಎದುರಿನಿಂದ ವ್ಯಕ್ತಿಯೊಬ್ಬ ಹಾದು ಹೋಗುತ್ತಿರುವುದು ದೃಷ್ಟಿಗೆ ಗೋಚರಿಸಿತು. ಅವರನ್ನು ಎಲ್ಲೋ ನೋಡಿದ ನೆನಪಾಗಿ ತಲೆ ಕೆರೆದುಕೊಂಡು ಗತದ ನೆನಪುಗಳನ್ನು ಉತ್ಖನನಗೊಳಿಸಿದವನಿಗೆ ಆ ವ್ಯಕ್ತಿ ಪ್ರೊಫೆಸರ್ ಮೈಲಾರಪ್ಪ ಎನ್ನುವುದು ಸ್ಪಷ್ಟವಾಯಿತು. ಚಿದಂಬರ ಎಸ್.ಬಿ.ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದಾಗ ಅಲ್ಲಿ ಮೈಲಾರಪ್ಪ ಇತಿಹಾಸ ಬೋಧಿಸುತ್ತಿದ್ದರು. ಅದೇ ಆಗ ಎಂ.ಎ ಪದವಿಯನ್ನು ಪೂರ್ಣಗೊಳಿಸಿ ಲೆಕ್ಚರರ್ ಆಗಿ ಸೇರಿದ್ದ ತರುಣ ಮೈಲಾರಪ್ಪ ತಮ್ಮ ತಲೆಯಲ್ಲಿ ಕಾರ್ಲ್ ಮಾರ್ಕ್ಸ್, ಲೆನಿನ್, ಮ್ಯಾಝಿನಿ, ಫಿಡೆಲ್ ಕ್ಯಾಸ್ಟ್ರೊ ಅವರನ್ನೇ ತುಂಬಿಕೊಂಡಿದ್ದರು. ತರಗತಿಯಲ್ಲಿ ದಾಸ್‌ಕ್ಯಾಪಿಟಲ್‌ನಿಂದ ಹೆಕ್ಕಿದ ವಾಕ್ಯಗಳನ್ನು ಉದ್ಧರಿಸುತ್ತ ಪ್ರಭುತ್ವ ಮತ್ತು ಬಂಡವಾಳಶಾಹಿಯ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದರೆ ಆಗಷ್ಟೆ ಕಾಲೇಜಿನ ಮೆಟ್ಟಿಲು ತುಳಿದಿದ್ದ ಹದಿಹರೆಯದ ತರುಣಿಯರು ಮೈಲಾರಪ್ಪನವರಲ್ಲಿ ತಮ್ಮ ಕನಸಿನ ರಾಜಕುಮಾರನನ್ನು ಕಂಡಷ್ಟೆ ಪುಳಕಗೊಳ್ಳುತ್ತಿದ್ದರು. ಶಾಂತವೀರಪ್ಪ ಗೌಡರ ಮಗಳು ಶಾಂತಲಕ್ಷ್ಮಿ ಒಂದುಹೆಜ್ಜೆ ಮುಂದೆ ಹೋಗಿ ಮೈಲಾರಪ್ಪನವರಿಗೆ ತನ್ನ ಪ್ರೇಮಪತ್ರವನ್ನು ರವಾನಿಸಿ ಮನದ ಬಯಕೆಯನ್ನು ತೋಡಿಕೊಂಡಿದ್ದಳು. ಪ್ರೀತಿಯಲ್ಲೂ ಕ್ರಾಂತಿ ಮಾಡಲು ಬಯಸಿದ್ದ ಮೈಲಾರಪ್ಪ ಅದೇ ತರಗತಿಯ ಮುಮ್ತಾಜಳ ಹಿಂದೆಬಿದ್ದು ಇಡೀ ಕಾಲೇಜಿನ ಯುವಪೀಳಿಗೆಯನ್ನು ರೋಮಾಂಚನಗೊಳಿಸಿದ್ದರು. ವಿಷಯ ಪ್ರಾಚಾರ್ಯರಿಂದ ಆಡಳಿತ ಮಂಡಳಿಯವರೆಗೂ

ರಾಜಕುಮಾರ ಕುಲಕರ್ಣಿ, ಕಲಬುರಗಿ ತಾಲೂಕಿನ ಕುಮಸಿ ಎನ್ನುವ ಹಳ್ಳಿಯವರು. ಬಾಗಲಕೋಟೆಯ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರಾಗಿದ್ದಾರೆ. ಪೂರ್ಣ ಸತ್ಯ, ಮನದ ಮಾತು, ಅನಾವರಣ, ಅನ್ವೇಷಣೆ, ಬೊಗಸೆಯಲ್ಲಿ ಕಡಲು, ಭಾವಭಿತ್ತಿ, ಹೆಜ್ಜೆ ಮೂಡಿದ ಹಾದಿ ಎನ್ನುವ ಲೇಖನಗಳ ಸಂಕಲನಗಳು ಮತ್ತು ಬೇರಿಗಂಟಿದ ಮರ ಎಂಬ ಕಥಾಸಂಕಲನ ಪ್ರಕಟವಾಗಿವೆ.